International Journal of Kannada Research 2016; 2(1): 01-07




International Journal of Kannada Research
www.kannadajournal.com

ISSN: 2454–5813
IJSR 2016; 2(1): 01-07
© 2016 IJKS
www.kannadajournal.com
Received: 01-11-2015
Accepted: 02-12-2015

**Dr. Neelambika Policepatil (Sherikar)**
Principal & Research Guide, Godutai Doddappa Appa Degree College For Women, S.B.Temple Road, Brahampur, Kalaburagi, Karnataka-585103.

**Correspondence**
**Dr. Neelambika Policepatil (Sherikar)**
Principal & Research Guide, Godutai Doddappa Appa Degree College For Women, S.B.Temple Road, Brahampur, Kalaburagi, Karnataka-585103.

# ಬಸವಕಲ್ಯಾಣದ ಶರಣರ ಪ್ರೇಕ್ಷಣಿಯ ಸ್ಥಳಗಳು

**Dr. Neelambika Policepatil (Sherikar)**

‘ಬಸವಣ್ಣಾ ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲಾ
ಅಯ್ಯಾ ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು
ಅಣ್ಣಾ ಶಶಿಧರ ನಟ್ಟಿದ ಮಣಿ ಪೂರೈಸಿತ್ತೆಂದು ಹ
ನೀವು ಲಿಂಗೈಕ್ಯವಾದೊಡೆ ನಮ್ಮೊಡನೆ ಭಕ್ತಿ ಹೋಯಿತ್ತಯ್ಯಾ
ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯ
ನಿಮ್ಮೊಡನೆ ಅಸಂಖ್ಯಾತರು ಹೋದರಣ್ಣಾ
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತು ಬಸವಣ್ಣಾ”೧
ಬಸವಣ್ಣ ಪ್ರಿಯ ಚನ್ನ ಸಂಗಯ್ಯಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನ ಬಸವಣ್ಣಾ ೧

ಕಲ್ಯಾಣವನ್ನು ಬಿಟ್ಟು ಹೋದ ಬಸವಣ್ಣನವರು ಲಿಂಗೈಕ್ಯರಾದ ಮೇಲೆ ದುಃಖತಪ್ತಳಾಗಿ ಮಹಾಶರಣೆ ಅಕ್ಕನಾಗಮ್ಮ ಆಡಿದ ವಚನವಿದು. ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಹೋದ ಗಳಿಗಿಯಲ್ಲಿಯೇ ಅದು ಪಡೆದುಕೊಂಡ ವೈಭವ ಕಳಚಿ ಹೋಯಿತು. ಅನೇಕ ಅತಿರಥ ಮಹಾರಥ ಅರಸರಿಗೆ ರಾಜಧಾನಿಯಾಗಿ ಮೆರೆದ, ಧರ್ಮ ನಿಷ್ಠುರ, ತತ್ತ್ವಾನುಭವಿಗಳು ಚಿಂತಕರು ಚಿಂತನೆಗೈದ ಕಲ್ಯಾಣ ಕೆಲವೇ ಕೆಲವು ಮತಾಂಧರರ ಕೈಯೊಳಗೆ ಸಿಕ್ಕು ಹಾಳಾಯಿತು. ಕಲ್ಯಾಣದ ಒಡಲಿನಲ್ಲಿ ಹುಟ್ಟಿಕೊಂಡು ಗಟ್ಟಿಗೊಂಡ ಅನೇಕ ತತ್ವಗಳು ಶೂನ್ಯವಾದವು. ಹಂಪೆಯಂತಹ ಪಟ್ಟಣಗಳು ಹಾಳಾದರೂ ಅಲ್ಲಿ ಕಲ್ಲುಗಳಾದರೂ ಬಿದ್ದಿವೆ. ಆದರೆ ಕಲ್ಯಾಣದಲ್ಲಿ ಆ ಕಲ್ಲುಗಳು ಸಹ ಸಿಗುವದಿಲ್ಲ.
೭೭೦ ಅಮರಗಣಂಗಳೂ, ಮುಖ್ಯವಾಗಿ ವಾಸಿಸಿರುವ ಕಲ್ಯಾಣದಲ್ಲಿ ಶರಣರ ನೆಲೆಗಳು ಕೇವಲ ಬೆರಳೆಣಿಕೆಗೆ ಮಾತ್ರ ಸಿಗುವವು. ಸಿಕ್ಕಷ್ಟು ಶರಣರನ್ನು ನೆನಪಿಸುವ ಕುರುಹುಗಳಾಗಿ ಉಳಿದಿವೆ.
ಬಸವಕಲ್ಯಾಣದ ಶರಣರ ಪ್ರೇಕ್ಷಣೀಯ ಸ್ಥಳಗಳಲ್ಲಿ ಕೇವಲ ಗವಿಗಳು ಮಾತ್ರವಲ್ಲದೆ ಮಠಗಳು ಮತ್ತು ದೇವಾಲಯಗಳು ಇವೆ. ಆದ್ದರಿಂದ
೧) ಮಠಗಳು
೨) ಗವಿಗಳು
೩) ದೇವಾಲಯಗಳು
ಈ ಮೂರು ವಿಭಾಗದಡಿ ಕಲ್ಯಾಣದ ಶರಣರ ಪ್ರೇಕ್ಷಣೀಯ ಸ್ಥಳಗಳು ಕುರಿತು ಮಾಹಿತಿ ನೀಡಲಾಗಿದೆ.

**೧) ಮಠಗಳು**
ಕಲ್ಯಾಣದ ಮಹತ್ವವನ್ನು ನಿರೂಪಿಸುವ ಚನ್ನಬಸವಣ್ಣನವರ ವಚನದಿಂದ ಕಲ್ಯಾಣದಲ್ಲಿ ಅಂದು ಇರುವ ಮಠಗಳು ಸಂಖ್ಯೆಯನ್ನು ಗುರುತಿಸಲಾಗಿದೆ.

ಎರಡು ಲಕ್ಷವು ಎಂಭತ್ತೈದು ಸಾವಿರದ ಏಳುನೂರೆಪ್ಪತ್ತು
ದಾಸೋಹದ ಮಠಂಗಳು.
ಆ ದಾಸೋಹದ ಮಠಗಳಿಗೆ ಮುಖ್ಯವಾದ ಬಸವರಾಜ ದೇವರ ಮಠ”

–ಅದರ ಮಹತ್ವವನ್ನು ಮುಖ್ಯವಾದ ಮುಂದುವರೆದು,
'ಅಸಂಖ್ಯಾತರ ಮಠಂಗಳು ಕಲ್ಯಾಣದೊಳಗೆ ಎಷ್ಟು ಎಂದರೆ
ಹನ್ನೆರೆಡು ಸಾವಿರ ಕಟ್ಟಳೆಯ ನೇಮದ ಭಕ್ತರ ಮಠಂಗಳು

ಮಠಂಗಳು ಐವತ್ತೆಂಟು ಸಾವಿರ ನಿತ್ಯ ಸಾವಿರದೈನೂರು ಮಠಂಗಳು ಐವತ್ತು ಸಾವಿರ ನಿತ್ಯ ಸಾವಿರದೈನೂರು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ದಾಸೋಹಿಗಳ ಮಠಂಗಳು ಹನ್ನೊಂದು ಸಾವಿರ ನಿತ್ಯ ಅವಾರಿಯಿಂದ ಮಾಡುವ ಮಾಟಕೂಟದ ಸದ್ಭಕ್ತರ ಮಠಂಗಳು ಒಂದು ಲಕ್ಷ ಜಂಗಮ ಸಹಿತ ಸಮಯಾಚಾರದಿಂದ ಲಿಂಗಾರ್ಚನೆಯ ಮಾಡುವ ಜಂಗಮ ಭಕ್ತರ ಮಠಂಗಳು ಎರಡು ಸಾವಿರದ ಏಳುನೂರೆಪ್ಪತ್ತು. ಇಂತುಪ್ಪ ಅಸಂಖ್ಯಾತರಿಗೆ ಮುಖ್ಯವಾಗಿ ರುದ್ರಲೋಕ ದಿಂದಿಳಿತಂದ ಪ್ರಮಥಗಣಂಗಳ ಮಠಗಳು ಏಳುನೂರೆಪ್ಪತ್ತು"೨

ಈ ವಚನವನ್ನು ಆಧಾರವಾಗಿಟ್ಟುಕೊಂಡು ನೋಡಿದರೆ ಕಲ್ಯಾಣದಲ್ಲಿ ಅಂದು ಲಕ್ಷ ಲಕ್ಷ ಪ್ರಮಾಣದಲ್ಲಿ ಮಠಗಳಿದ್ದಂತೆ ತೋರುತ್ತದೆ. ಪ್ರತಿಯೊಬ್ಬ ಶರಣರು ವಾಸಿಸಿರುವ ಸ್ಥಳವನ್ನು ಮಠವೆಂದೇ ಕರೆದಂತೆ ತೋರುತ್ತದೆ. ಐಹಿಕ ಸುಖಭೋಗಗಳನ್ನೆಲ್ಲಾ ತೊರೆದು, ಸರಳ ಸಜ್ಜನರಾಗಿ ಬದುಕಿದ ಶರಣರ ವಾಸಸ್ಥಳ ಮಠವಿಲ್ಲದೆ ಮತ್ತೇನು? ಜಂಗಮ ಸಂಸ್ಕೃತಿಯನ್ನು ಪ್ರತಿಪಾದಿಸುವ ಈ ಮಠಗಳು ಸಮಾಜೋದ್ಧಾರವನ್ನು ತಮ್ಮ ಮುಖ್ಯ ಗುರಿಯನ್ನಾಗಿರಿಸಿಕೊಂಡಿವೆ. ಜಾತಿ, ಮತ, ಪಂಥ, ಲಿಂಗಭೇದವಿಲ್ಲದೇ, ಸಮಾಜದ ಒಟ್ಟಾರೆ ಜನರನ್ನು ಸನ್ಮಾರ್ಗಕ್ಕೆ ಹಚ್ಚುವ ಕೆಲಸದಲ್ಲಿ ಮಗ್ನರಾಗಿರುತ್ತೆವೆ. ಪ್ರಸಾದದ ಜೊತೆಯಲ್ಲಿ ಅಕ್ಷರ ಜ್ಞಾನವನ್ನು ನೀಡಿ ಜನರ ವ್ಯಕ್ತಿತ್ವ ದೊಡ್ಡದಾಗಿರಿಸುತ್ತವೆ. ಈ ನಿಟ್ಟಿನಲ್ಲಿ ಅಂದಿನ ಕಲ್ಯಾಣದ ಮಠಗಳು ಕಾರ್ಯೋನ್ಮುಖವಾಗಿವೆ. ಹೊಸದಾದ ಸಮಾಜ ನಿರ್ಮಾಣವನ್ನು ತಮ್ಮ ಗುರಿಯನ್ನಾಗಿಸಿಕೊಂಡ ಶರಣರ ಕಲ್ಯಾಣದಲ್ಲಿ ಮನೆ ಮನೆಗಳೆಲ್ಲಾ ಮಠಗಳಾಗಿ ಪರಿವರ್ತಿತಗೊಂಡಿವೆ.

ಅದರೆ ದುರ್ದೈವದ ಸಂಗತಿ ಎಂದರೆ ಕಲ್ಯಾಣ ಮತ್ತು ಅದರ ಸುತ್ತಮುತ್ತ ಹುಡುಕಿದರೂ ಐವತ್ತು ಮಠಗಳು ಸಿಗುವದು ದುರ್ಲಭವಾಗಿದೆ. ಬಸವಕಲ್ಯಾಣದಲ್ಲಿ ಇಂದು ಶರಣರ ಹೆಸರಿನಲ್ಲಿ ಏಳು ಮಠಗಳು ಮಾತ್ರ ಲಭ್ಯವಾಗಿವೆ. ಉಳಿದ ಕೆಲವು ಮಠಗಳ ಹೆಸರುಗಳು ಮಾತ್ರ ಸಿಗುತ್ತವೆ. ಅವು ಯಾವ ಶರಣರಿಗೆ ಸಂಬಂಧಿಸಿದ್ದವೆಂಬುದು ತಿಳಿಯಲು ಸಾಧ್ಯವಿಲ್ಲ.

### ೧) ಜೇಡರ ದಾಸಿಮಯ್ಯದ ಮಠ

ಆದ್ಯ ವಚನಕಾರರೆನೆಸಿದ ಜೇಡರ ದಾಸಿಮಯ್ಯನವರ ಒಂದಲ್ಲ ಎರಡು ಮಠಗಳನ್ನು ಕಲ್ಯಾಣದಲ್ಲಿ ಇಂದು ನೋಡಬಹುದು ಆ ಪಟ್ಟಣದ ಶಹಾಪೂರ ಓಣಿಯಲ್ಲಿ ಎರಡು ಮಠಗಳು ಕಂಡು ಬರುತ್ತವೆ.

ಜೇಡರ ದಾಸಿಮಯ್ಯ ಬಸವ ಪೂರ್ವದ ಶರಣರು, ಬಸವಣ್ಣನವರು ಅವರನ್ನು ನೋಡಿಯೇ ಇಲ್ಲ; ಕಲ್ಯಾಣಕ್ಕೆ ಇವರು ಬಂದಿಲ್ಲ ಎಂದು ಅಭಿಪ್ರಾಯ ಪಡುವ ಜನರಿಗೆ ಈ ಎರಡು ಮಠಗಳು ಉತ್ತರವಾಗಿವೆ. ಅವರು ಕಲ್ಯಾಣಕ್ಕೆ ಬಂದಿಲ್ಲವೆಂದರೆ ಅವರ ಹೆಸರಿನ ಮಠಗಳು ಕಲ್ಯಾಣದಲ್ಲಿ ನೋಡಲು ಸಾಧ್ಯವಿರಲಿಲ್ಲ.

ಆದರೆ ಆ ಶರಣರು ಕಲ್ಯಾಣಕ್ಕೆ ಬಸವಪೂರ್ವದಲ್ಲಿಯೇ ಬಂದು, ಬಸವಣ್ಣನವರ ಸಂದರ್ಭದಲ್ಲಿಯೂ ಅವರು ಕಲ್ಯಾಣದಲ್ಲಿಯೇ ಇದ್ದರೆಂದು, ನಂತರ ಅವರು ಕಲ್ಯಾಣ ಬಿಟ್ಟು ಹೋದರೆಂದು ಆ ಮಠಗಳಲ್ಲಿ ಇಂದು ವಾಸಿಸುತ್ತಿರುವ ಜನರು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯಕ್ಕೆ ಕೆಲವು ಸಾಹಿತ್ಯ ಕೃತಿಗಳು ಮತ್ತು ವಚನಗಳು ಪುಷ್ಠಿಯನ್ನು ಕೊಡುತ್ತವೆ.

ಬಸವಣ್ಣನವರ ಸಮಕಾಲೀನರಾದ ಶಂಕರದಾಸಿಮಯ್ಯನವರು ಜೇಡರ ದಾಸಿಮಯ್ಯನವರ ತವನಿಧಿ ಅಹಂಕಾರ ಮುರಿದದ್ದು ಮತ್ತು ಚಾಲುಕ್ಯ ಜಯಸಿಂಹನ ಎದುರಿಗೆ ವಿಷ್ಣು ಪ್ರತಿಮೆಯನ್ನು ಸುಟ್ಟಿರುವ ವಿಷಯ ಹರಿಹರನ ' ಶಂಕರದಾಸಿಮಯ್ಯನ ರಗಳೆ 'ಯಿಂದ ತಿಳಿದು ಬರುತ್ತದೆ.

ಆ ಜಯಸಿಂಹ ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ತಮ್ಮನೆಂಬುದು ಹೆಚ್ಚಿನ ಸಂಶೋಧಕರ ಅಭಿಪ್ರಾಯವಾಗಿದೆ. ಈತ ಕಲ್ಯಾಣದ ರಾಜನಾಗಿರಲಿಲ್ಲ. ಯುವರಾಜನಂತೂ ಆಗಿದ್ದ. ಏಕೆಂದರೆ ಹರಿಹರ ಕವಿ ತನ್ನ ಕೃತಿಯಲ್ಲಿ "ಜಯಸಿಂಹರಾಯನಿರ್ಪ ಕಲ್ಯಾಣದೊಳು" ಎಂದೂ ಸ್ಪಷ್ಟವಾಗಿ ಹೇಳುತ್ತಾನೆ. ಈತನೇ ತ್ರಿಪುರಾಂತಕ ದೇವರ ಸ್ಥಾನಿಕರನ್ನು ಕರೆಸಿ ಶಂಕರದಾಸಿಮಯ್ಯನವರನ್ನು ಕರೆಯಲು ಕಳುಹಿಸುತ್ತಾನೆ.

ಯುವರಾಜ ಜಯಸಿಂಹ ಶಂಕರ ದಾಸಿಮಯ್ಯನನ್ನು ವಿಗ್ರಹ ಭೇದಿಸಲು ಆಹ್ವಾನಿಸಿದಾಗ ಶಂಕರದಾಸಿಮಯ್ಯ ನಿದ್ದದ್ದು ಮುದೇನೂರಿನ ಜೇಡರ ದಾಸಿಮಯ್ಯನ ಹತ್ತಿರ ಹರಿಹರ ಅದನ್ನು ಹೀಗೆ ಹೇಳುತ್ತಾನೆ

"ನೀವಿಂದು ಪೋಗಿ ಮುದನೂರೊಳಿರ್ದ ಶಂಕರದಾಸಯ್ಯನಂ ಒಡಗೊಂಡು ಬನ್ನಿರೆಂದರರಸಂ ಪೇಳೆ ಕೇಳ್ದು ತಮ್ಮಡಿಗಳ್ಮುದನೊರ್ಗೆ ಬಿಂದು ಸತ್ಯ ಶರಣನಂ ಕಂಡು ದೇವದೇವ ಕಲ್ಯಾಣದ ತ್ರಿಪುರಾಂತಕ ದೇವರೇ ಮೊದಲಾದ ಮಹಾ ಸ್ಥಾನಂಗಳಂ ಕಂಡು ೩

ಆ ಸಂದರ್ಭದಲ್ಲಿ ಕಲ್ಯಾಣಕ್ಕೆ ಹೊರಟ ಶಂಕರ ದಾಸಿಮಯ್ಯನವರೊಂದಿಗೆ ಜೇಡರ ದಾಸಿಮಯ್ಯನವರು ಕಲ್ಯಾಣಕ್ಕೆ ಬಂದಂತೆ ತೋರುತ್ತದೆ. ಕಲ್ಯಾಣದಲ್ಲಿ ವಿಷ್ಣು ಪ್ರತಿಮೆಯನ್ನು ಸುಟ್ಟ ಮೇಲೆ ಜಯಸಿಂಹನಿಗೆ ಶಂಕರ ದಾಸಿಮಯ್ಯನವರಲ್ಲಿ ಭಕ್ತಿ ಗೌರವಗಳು ಉಂಟಾಗಿ ಆ ಶರಣರನ್ನು ಯುವರಾಜ ಅಲ್ಲಿಯೇ ಉಳಿಸಿಕೊಂಡಂತೆ ತೋರುತ್ತದೆ.

ಅಲ್ಲದೇ ದಾಸ ದುಗ್ಗಳೆ ದಂಪತಿಗಳಿಗೂ ಶಂಕರದಾಸಿಮಯ್ಯವಲ್ಲಿ ಭಕ್ತಿ ಗೌರವ ಹೊಂದಿದವರಾಗಿದ್ದರೆ ಅವರು ಕೂಡ ಇವರ ಜೊತೆಯಲ್ಲಿ ಕಲ್ಯಾಣದಲ್ಲಿ ಉಳಿದಂತೆ ತೋರುತ್ತದೆ.

ಶಂಕರದಾಸಿಮ್ಯನಂತೂ ಬಸವಾದಿ ಶರಣರ ಸಮಕಾಲೀನ ವಿಂಬುದಕ್ಕೆ ಆತನ ವಚನಗಳೇ ಸಾಕ್ಷಿಯಾಗಿವೆ.

'ಎನ್ನ ಕಾಯಕ್ಕೆ ಗುರು ವಾದನಯ್ಯ ಬಸವಣ್ಣನೆ'
ಎನ್ನ ಜೀವಕ್ಕೆ ಲಿಂಗ ವಾದನಯ್ಯ ಚನ್ನಬಸವಣ್ಣನು
ಎನ್ನ ಪ್ರಾಣಕ್ಕೆ ಪ್ರಸಾದವಾದನಯ್ಯ ಮರುಳಶಂಕರನು
ಎನ್ನ ಜ್ಞಾನಕ್ಕೆ ಜಂಗಮನಾದನಯ್ಯ ಪ್ರಭುದೇವರು
ಇಂತವರ ಕರುಣದಿಂದಲಾನು ಬದುಕಿದೆನೆಯ್ಯಾ"೪

ಜೇಡರ ದಾಸಿಮಯ್ಯನವರು ತಮ್ಮ ವಚನಗಳಲ್ಲಿ ಬಸವಣ್ಣನವರನ್ನು ಹೆಸರಿಸದಿದ್ದರೂ ಅವರು ಸಮಕಾಲೀನರಾಗಿದ್ದ ಡೋಹರ ಕಕ್ಕಯ್ಯ ಮೊದಲಾದವರನ್ನು ನೆನೆಯುತ್ತಾರೆ. ಜೇಡರ ದಾಸಿಮಯ್ಯನ ಮಡದಿ ದುಗ್ಗಳೆಯು ತನ್ನ ವಚನದಲ್ಲಿ ಬಸವಣ್ಣ ಮುಂತಾದ ಶರಣರನ್ನು ಸ್ಮರಿಸುತ್ತಾಳೆ.

'ಬಸವಣ್ಣನಿಂದ ಗುರು ಪ್ರಸಾದಿಯಾದೆನು
ಚನ್ನ ಬಸವಣ್ಣನವರಿಂದ ಲಿಂಗ ಪ್ರಸಾದಿಯಾದೆನು
ಪ್ರಭುದೇವರಿಂದ ಜಂಗಮ ಪ್ರಸಾದಿಯಾದೆನು
ಮರುಳ ಶಂಕರ ದೇವರಿಂದ ಮಹಾ ಪ್ರಸಾದಿಯಾದೆನು
ಇಂತೀ ಚತುರ್ವಿಧವು ಏಕೀಭವಿಸಿ ಪ್ರಾಣಲಿಂಗವಾದ
ಮಹಾಮಹಿಮಂಗೆ ಶರಣೆಂದು ಬದುಕಿದೆನಯ್ಯಾ
ದಾಸಯ್ಯ ಪ್ರಿಯ ರಾಮನಾಥಾ" ೫
ಕಣ್ಣಾರೆ ಕಂಡಾಗಲೇ ಹೀಗೆ ನುಡಿಯಲು ಸಾಧ್ಯವಿದೆ.

ಅಲ್ಲದೆ ಬಸವಣ್ಣನವರು ಮತ್ತು ಅಕ್ಕಮಹಾದೇವಿಯರು ತಮ್ಮ ವಚನಗಳಲ್ಲಿ ದಾಸಿಮಯ್ಯನವರನ್ನು ನೆನೆಯುತ್ತಾರೆ.

‘ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ
ಕಕ್ಕಯ್ಯ ನೊಕ್ಕುದನಿಕ್ಕ ನೋಡಯ್ಯ
ದಾಸಯ್ಯ ಶಿವದಾನವನೆರೆಯ ನೋಡಯ್ಯಾ
ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ ’
ಉತ್ತಮ ಮಹಿಮೆ
ಕೂಡಲ ಸಂಗಮದೇವಾ, ಶಿವಧೋ ಶಿವಧೋ। ೬

ಎಂದು ಬಸವಣ್ಣನವರು ಉದ್ಗರಿಸಿದ್ದರೆ ಅಕ್ಕಮಹಾದೇವಿ ಹೀಗೆ ಹೇಳುತ್ತಾಳೆ.

ಅನಿಮಿಷನಲ್ಲಮಯ್ಯ ಮರುಳ ಶಂಕರಯ್ಯ
ಕೋಲ ಶಾಂತಯ್ಯ ಮಾದಾರ ಧೂಳಯ್ಯ
ಹಲಾಯುಧ ದಾಸಿಮಯ್ಯ ಭಂಡಾರಿ ಬಸವರಾಜ
ಮುಖ್ಯವಾದ ಚನ್ನಮಲ್ಲಿಕಾರ್ಜುನನ
ಶರಣರಿಗೆ ನಮೋ ನಮೋ ಎಂಬೆನು”೭

ಈ ಎರಡು ವಚನಗಳನ್ನು ಗಮನದಲ್ಲಿರಿಸಿಕೊಂಡು ನೋಡಿದರೆ ವರ್ತಮಾನ ಸೂಚಕ ಮಾತಿನ ದಾಟಿ ಇಲ್ಲಿದೆ. ಇಲ್ಲಿಯ ದಾಸಯ್ಯ ಜೇಡರ ದಾಸಿಮಯ್ಯನೇ ಆಗಿದ್ದಾರೆ. ಬಸವಣ್ಣನವರು ತಮ್ಮ ವಚನಗಳಲ್ಲಿ ದಾಸಯ್ಯ ಎಂದೇ ಕರೆದು ಒಂದು ವಚನದಲ್ಲಿ ಮಾತ್ರ ಜೇಡರ ದಾಸಿಮಯ್ಯ ಎಂದು ಸಂಭೋದಿಸುತ್ತಾರೆ.

ಮೇಲೆ ನಿರೂಪಿಸಿದ ಎಲ್ಲಾ ಆಧಾರಗಳಿಂದ ತಿಳಿದು ಬರುವ ವಿಷಯವೆಂದರೆ ಜೇಡರ ದಾಸಿಮಯ್ಯ ಚಾಲುಕ್ಯ ಯುವರಾಜ ಜಯಸಿಂಹನ ಕಾಲಕ್ಕೆ ಕಲ್ಯಾಣಕ್ಕೆ ಶಂಕರ ದಾಸಿಮಯ್ಯನವರೊಂದಿಗೆ ಬಂದಾಗ ಎಳೆವಯಸ್ಸಿನವರಾಗಿದ್ದು, ಮುಂದೆ ಬಸವಣ್ಣನವರ ಕಾಲಕ್ಕೆ ಇಳಿವಯಸ್ಸಿನವರಾಗಿದ್ದಂತೆ ತೋರುತ್ತದೆ. ಬಸವಣ್ಣನವರ ಕಾಲದಲ್ಲಿ ಕೆಲವು ದಿನಗಳ ಮಟ್ಟಿಗೆ ಮಾತ್ರ ಕಲ್ಯಾಣದಲ್ಲಿ ಉಳಿದಿರಬಹುದು.

ಇಂದು ಕಲ್ಯಾಣದಲ್ಲಿದ್ದ ಎರಡು ಮಠಗಳಲ್ಲಿ ಒಂದು ಮಠ ಜಯಸಿಂಹನ ಕಾಲಕ್ಕೆ ಬಂದಾಗಿನದೆಂದೂ ಇನ್ನೊಂದು ಮಠ ಬಸವಣ್ಣನವರ ಕಾಲಕ್ಕೆ ಬಂದಾಗಿನದೆಂದೂ ಹೇಳುತ್ತಾರೆ. ಎರಡೂ ಮಠಗಳು ಇಂದು ಸಂಸಾರಿಕರ ತಾಣಗಳಾಗಿವೆ. ಇಂದಿಗೂ ಮಠಗಳಲ್ಲಿ ದೊಡ್ಡದಾದ ಗದ್ದುಗೆಗಳಿವೆ, ಬಾವಿಗಳಿವೆ. ಆ ಬಾವಿಯ ನೀರನ್ನು ದಾಸಿಮಯ್ಯನವರು ತಮ್ಮ ಕಾಯಕಕ್ಕೆ ಬಳಸುತ್ತಿದ್ದರೆಂದು ಆ ಜನರು ಭಕ್ತಿಯಿಂದ ಹೇಳುತ್ತಾರೆ. ಒಂದು ಮಠಕ್ಕೆ ಕಳ್ಳಿಮಠವೆಂದೇ ಕರೆಯುತ್ತಾರೆ.

**೨) ಕಂಬಳಿ ಮಠ**

ಬಸವಕಲ್ಯಾಣ ಪಟ್ಟಣದ ಮಧ್ಯದಲ್ಲಿರುವ ಈ ಮಠವು ೧೨ನೆಯ ಶತಮಾನದ ಮಹಾಶಿವಶರಣ ಸಂಬೋಳಿ ನಾಗಿದೇವರಿಗೆ ಸಂಬಂಧ ಪಟ್ಟಿದ್ದಾಗಿದೆ. ಅವರ ಕಾಯಕವು ಕಂಬಳಿ ನೇಯುವುದಾಗಿರುವದರಿಂದ ಆ ಕಾಯಕದ ವಿಶೇಷಣವೇ ಆ ಮಠಕ್ಕೆ ಉಳಿದುಕೊಂಡು ಬಂದಿದೆ. ಹೀಗಾಗಿ ಆ ಶರಣರು ಕಂಬಳಿ ನಾಗಿದೇವರೆಂದೇ ಪ್ರಸಿದ್ಧರಾಗಿದ್ದಾರೆ.

ಇವರ ಜೀವನಕ್ಕೆ ಸಂಬಂಧಿತ ವಿಷಯಗಳು ಕನ್ನಡದ ಕೆಲವು ಕಾವ್ಯಗಳಲ್ಲಿ ಮೂಡಿಬಂದಿದೆ. ಇವರನ್ನು ಕುರಿತೇ ಕಾವ್ಯಗಳು ಹುಟ್ಟದಿದ್ದರೂ ಬಸವಣ್ಣನವರ ಜೀವನ ಕುರಿತು ಬರೆಯುವಾಗ ಮುಖ್ಯವಾಗಿ ಇವರ ವಿಷಯ ಬರೆದಿದ್ದಾರೆ. ಅಲ್ಲದೆ ಕಲ್ಯಾಣದ ಭಾಗದಲ್ಲಿ ಈ ಶರಣರಿಗೆ ಸಂಬಂಧಪಟ್ಟಂತೆ ಜಾನಪದ ಹಾಡುಗಳು ಕೂಡಾ ಲಭ್ಯವಾಗಿವೆ.

ಹಿರಿಯ ಮಾಹೇಶ್ವರ ಎನಿಸಿಕೊಂಡ ನಾಗಿದೇವನ ಮನೆಯಲ್ಲಿ ಬಸವಣ್ಣನವರು ಪ್ರಸಾದ ಸ್ವೀಕರಿಸಿದಾಗ ಸಹಿಸದ ವಿಪ್ರರು ಬಿಜ್ಜಳನಲ್ಲಿ ಚಾಡಿ ಹೇಳುವರು. ಬಿಜ್ಜಳ ಬಸವರಾಜ ಇಬ್ಬರ ನಡುವೆ ವಾದ ವಿವಾದಗಳು ನಡೆದು ಕೊನೆಗೆ ತುಂಬಿದ ಸಭೆಯಲ್ಲಿ ವಿಪ್ರವೊಬ್ಬನ ಬೆರಳನ್ನು ಸೀಳಲಾಗಿ ಆತನ ಬೆರಳಿನಿಂದ ರಕ್ತದ ಜೊತೆಗೆ ಬಾಲ ಹುಳುಗಳು ಸುರಿಯುವವು. ಶಿವನಾಗಮಯ್ಯನನ್ನು ಪರೀಕ್ಷಿಸಲಾಗಿ “ಶ್ವೇತ ಪರ್ವತದ ಪಾದತಟದ ಸುರಿವುದರಿವಿನ ಹಾಲಹಳ್ಳ ಹರಿಯುತ್ತೆಂದು” ೮ ಹರಿಹರ ತನ್ನ ಬಸವರಾಜ ದೇವರ ರಗಳೆ ಕೃತಿಯಲ್ಲಿ ಹೇಳುತ್ತಾನೆ.

ಚನ್ನಪ್ಪ ಕವಿಯು ‘ಶರಣ ಲೀಲಾಮೃತ ’ ಕಾವ್ಯ ದಲ್ಲಿಯೂ ನಾಗಿದೇವನ ಶಿವ ಜೀವನದ ಪಾರಮ್ಯವನ್ನು ಭಕ್ತಿಯಿಂದ ನಿರೂಪಿಸುತ್ತಾನೆ. ೧೪ ಜನಪದರು ಕೂಡಾ ಶಿವನಾಗಿದೆ ಶಿವನ ಶಿವ ಜೀವನ ಕುರಿತು ಹಾಡುತ್ತಾರೆ,

‘ಕಲ್ಯಾಣದ ಊರಾಗ ಕಂಬಳಿ ಮಠದಾಗ
ಕಂಬಳಿ ನೇಯ್ದಾರ ಸಂಬೋಳನಾಗ ಶಿವಲಿಂಗ ಬನ್ನಿರೆ’
“ಪೂಜೆಯು ತಾಮುಗಿಸಿ ಕಾಯಕ ತಾನಡೆಸಿ
ಕುರಿಉಣ್ಣಾ ್ಯಗ ಕಂಬಳಿ ನೇಯ್ದಾರ ಶಿವಲಿಂಗ ಬನ್ನಿರೆ
೧೦

ನೆಯ್ದು ಕಂಬಳಿಗಳನ್ನು ಮಾರಿ, ಅದರಿಂದ ದಾಸೋಹ ನಡೆಸುವರು ನಾಗಿದೇವರು ಒಂದು ದಿನ ಕಂಬಳಿ ಮಾರಲು ಪೇಟೆಗೆ ಹೋದಾಗ ದಾರಿಯಲ್ಲಿ ಕೊಂಡಿಯ ಮಂಚಣ್ಣಸಿಕ್ಕೂ ‘ ಉಂಬಳಿ ಕೊಡುತ್ತಿನಿ ಕಂಬಳಿ ನೀಕೊಡು “ ಎಂದಾಗ ‘ಉಂಬಳಿ ನನಗ್ಯಾಕ ಎಂದು ಹೇಳಿ ನಾಗಿದೇವ ಮುಂದಕ್ಕೆ ಹೋಗುತ್ತಾರೆ.’

ಆದರೆ ಮಂಚಣ್ಣ ಅದನ್ನು ಕಸಿದಕೊಂಡು ಮನೆಗೆ ಹೋಗಿ ಹಾಸಿ ಅದರ ಮೇಲೆ ಮಡದಿಯೊಂದಿಗೆ ಕೂಡಲು ‘ ಉರಿ ಉರಿ ’ ಎಂದೂ ಚೀರಲು ಪ್ರಾರಂಭಿಸುತ್ತಾರೆ. ಮಂಚಣ್ಣನ ಹೆಂಡತಿ ಬಂದು ‘ ಇದೇಲ್ಲಾ ಏನು ಎಂದು ಕೇಳಿದಾಗ ಮಂಚಣ್ಣ ನಡೆದ ವಿಷಯವನ್ನೆಲ್ಲಾ ತಿಳಿಸುವನು. ತಕ್ಷಣ ಆ ಕಂಬಳಿಯನ್ನು ಹಿಡಿದುಕೊಂಡು ಅವಳು ಶರಣರ ಮಠಕ್ಕೆ ಬರುತ್ತಾಳೆ.’

‘ಶರಣರ ಪಾದಕ್ಕೆ ಕಂಬಳಿಯಿಟ್ಟು ಕೈಜೋಡಿಸಿ ಭಕ್ತೀಲಿ ನಿಲ್ಲುತ್ತಾಳೆ” ಹೀಗೆ ಮಾಡುವಷ್ಟರಲ್ಲಿ ಆಕೆಯ ಮೈ ಉರಿ ನಿಲ್ಲುತ್ತದೆ. ಗಂಡನಿಗೂ ಕೂಡಾ ಹಾಗೇ ಮಾಡಲು ತಿಳಿಸುತ್ತಾಳೆ ಆತನು ಕೂಡಾ ಹಾಗೆ ಮಾಡಿ ಉರಿಯಿಂದ ಮುಕ್ತನಾಗುತ್ತಾನೆ. ಮುಂದಿನ ದಿನಗಳಲ್ಲಿ ಇಬ್ಬರೂ ನಾಗಿದೇವರನ್ನು ಗುರುವೆಂದು ತಿಳಿದು ಬಾಳಿದರೆಂದು ಜನಪದ ಹಾಡು ತಿಳಿಸುತ್ತದೆ.’

ಇಂತಹ ಮಹಾನ್ ಶರಣರು ವಾಸಿಸುವ ಈ ಮಠವು ಸುಸ್ಥಿತಿಯಲ್ಲಿದೆ ಮಠದ ಒಳಗೊಂಡು ಕೋಣೆಯಿದ್ದು ಅಲ್ಲಿ ದೊಡ್ಡದಾದ ಗದ್ದುಗೆಯಿದೆ ಲಿಂಗ, ನಂದಿ, ಜೋಡು ಪಾದುಕೆಗಳಿವೆ.

**೩) ಹುಲಿಯ ಕಂತೆ ಮಠ**

ಜೇಡರ ದಾಸಿಮಯ್ಯ ಮಠದ ಸಮೀಪದಲ್ಲಿಯೇ ಈ ಮಠವಿದೆ. ಈ ಮಠದ ಮೂಲ ಪುರುಷ ೧೨ನೆಯ ಶತಮಾನದ ಪ್ರಸಿದ್ಧ ಶರಣರಾಗಿದ್ದ ರೇವಣಸಿದ್ದೇಶ್ವರರು. ಮುಂದೆ ಈ ಮಠವನ್ನು ಕಟ್ಟಿಸಿ ಅದರ ಪ್ರಗತಿಗೆ ಕಾರಣರಾದವರು ಶ್ರೀಶಿವಯೋಗಿ ಸ್ವಾಮಿಗಳು ಅವರ ಕಾಲಕ ಕ್ರಿ.ಶ. ೧೪ನೇ ಶತಮಾನ.

ಮೊದಲೆಲ್ಲಾ ರೇವಣ್ಣಸಿದ್ದೇಶ್ವರ ಮಠ ಎಂದೇ ಪ್ರಸಿದ್ಧವಾಗಿದ್ದರೂ ಶಿವಯೋಗಿ ಸ್ವಾಮಿಗಳ ಕಾಲದಲ್ಲಿ ನಡೆದ ಒಂದು ಪವಾಡ

ಸದೃಶವಾದ ಘಟನೆಯಿಂದಾಗಿ ಹುಲಿಯ ಕಂತೆ ಮಠ ಎಂದು ಪ್ರಸಿದ್ಧವಾಯಿತು.

ಕಲ್ಯಾಣದ ಪ್ರಸಿದ್ಧ ಸೂಫಿ ಸಂತ ಸೈಯದ್ ತಾಜೋದ್ದಿನ್ ಇವರು ಕ್ರಿ.ಶ. ೧೩೮೭ ರಲ್ಲಿ ಇರಾಣದಿಂದ ಕಲ್ಯಾಣಕ್ಕೆ ಬಂದು ನೆಲೆಸಿದ್ದ, ಹಿಂದೂ ಮುಸ್ಲಿಂ ಇಬ್ಬರಿಂದಲ್ಲೂ ಪೂಜೆಸಲ್ಪಡುವ ಈ ಸಂತನು ಯಾವಾಗಲೂ ಹುಲಿಯ ಮೇಲೆ ಕುಳಿತು ಸಂಚರಿಸುತ್ತಿದ್ದರು.

ಒಮ್ಮೆ ಹೀಗೆ ಬರುವಾಗ ಅವರ ಶಿಷ್ಯರು ಶಿವಯೋಗಿ ಸ್ವಾಮಿಗಳ ಮಹಿಮೆಯನ್ನು ತಿಳಿಸಿದಾಗ ಇವರು ನಿರ್ಲಕ್ಷಿಸಿ ನನ್ನ ಮುಂದೆ ಅವರದೇನು ಮಹಾ ಎಂದು ಅಹಂಕಾರದಿಂದ ನುಡಿಯುತ್ತಾರೆ ಈ ಮಾತನ್ನು ತಮ್ಮ ಅಂತರ ಜ್ಞಾನದಿಂದ ತಿಳಿದು ಕೊಂಡ ಶಿವಯೋಗಿಗಳು ಆತ ನನ್ನ ಹತ್ತಿರ ಬರುವದು ಬೇಡ ನಾನೇ ಅವರ ಹತ್ತಿರ ಹೋಗುತ್ತೇನೆ. ಎಂದು ಸಿದ್ದರಾಗುತ್ತಾರೆ

ಆ ವೇಳೆಯಲ್ಲಿ ಶಿವಯೋಗಿಗಳು ಕುಳಿತಿದ್ದು ಹುಲಿಯ ಚರ್ಮದ ಮೇಲೆ ಆ ಚರ್ಮವೇ ಅವರನ್ನು ಎತ್ತಿಕೊಂಡು ಈ ಸಂತರ ಹತ್ತಿರ ತಂದಾಗ – "ನಾನು ಜೀವಂತ ಹುಲಿಯ ಮೇಲಾದರೂ ತಿರುಗುತ್ತೇನೆ ಇವರು ನಿರ್ಜೀವ ಚರ್ಮದ ಮೇಲೆ ಹೊರಟಿದ್ದಾರಲ್ಲ" – ಎಂದು ಆಶ್ಚರ್ಯಪಟ್ಟು, ಅಹಂಕಾರ ನಿರಸನ ಮಾಡಿಕೊಂಡು ಶಿವಯೋಗಿಗಳ ದರ್ಶನ ಪಡೆಯುತ್ತಾರೆ ಅಂದಿನಂದ ಈ ಮಠದ ಹೆಸರು ಹುಲಿಯಕಂತೆ ಮಠ ಎಂದಾಯಿತು.

ಮುಂದೆ ಶಿವಯೋಗಿಗಳು ಅವರನ್ನು ಇಲ್ಲಿಯೇ ಇಟ್ಟುಕೊಳ್ಳುತ್ತಾರೆ. ಅವರ ಹೆಸರಿನಲ್ಲೆಂದು ದರ್ಗಾಕಲ್ಯಾಣದಲ್ಲಿದೆ. ಮಠಕ್ಕೆ ಬರುವ ಭಕ್ತರು ದರ್ಗಾಕ್ಕೂ ಹೋಗಿ ಬರುತ್ತಾರೆ.

ಮೂಲ ಶರಣರು ರೇವಣಸಿದ್ದರು ಮಹಾನ ಶರಣರಾಗಿದ್ದು, ಒಂದೇ ಕಡೆನೆಲೆ ನಿಲ್ಲದೆ ಭಾರತದ ಉದ್ದಕ್ಕೂ ಸಂಚರಿಸಿ ಧರ್ಮ ಪ್ರಚಾರ ಕೈಕೊಂಡಿದ್ದಾರೆ. ಹಲವಾರು ಪವಾಡಗಳನ್ನು ಮಾಡಿದ್ದಾರೆ. ಇವರ ಮಹಾ ವ್ಯಕ್ತಿತ್ವವನ್ನು ಗಮನಿಸಿಯೇ ಅವರ ಜನನ ಲಿಂಗೋದ್ಭವ ಎಂದು ಮಹಾಕಾವ್ಯಗಳು ವರ್ಣಿಸುತ್ತವೆ. ಆದರೆ ಆ ರೀತಿ ಜನನ ಅವೈಜ್ಞಾನಿಕವಾದದು. ಶಿರವಾಳದ ಶಿಲಾಶಾಸನದಲ್ಲಿ ಉಲ್ಲೇಖಿಸಲ್ಪಟ್ಟಂತೆ ಇವಳು ಶಿವಯೋಗಿ ಶಾಂತಿಮಯ್ಯಗಳ ಮಗನಾಗಿದ್ದರು. ರೇವಣಸಿದ್ದರು ಮುಂದೆ ಕಲ್ಯಾಣಕ್ಕೆ ಬಂದಂತೆ ಕಾಲಜ್ಞಾನ ವಚನಗಳಿಂದ ತಿಳಿದು ಬರುತ್ತವೆ. ೧೨

ಅಲ್ಲದೆ ಇದೇ ಕಾಲಜ್ಞಾನ ವಚನದಲ್ಲಿ ರೇವಣಸಿದ್ದರ ಚಂಗಣಿಗಿಲ ಮಂಟಪ ಕಲ್ಯಾಣದಲ್ಲಿತ್ತೆಂದು ಉಲ್ಲೇಖವಾಗಿದೆ. ಆ ಮಂಟಪದಲ್ಲಿ ಮರುಳಸಿದ್ಧ ಏಕೋರಾಮ, ಏಕಾಂತರಾಮಿತಂದೆ, ಹಾವಿನ ಹಾಳ ಕಲ್ಲಯ್ಯ, ನಿಜಗುಣಯೋಗಿ, ಕೀಲಾರ ಭೀಮಣ್ಣಾ, ಕೋವೂರು ಬ್ರಹ್ಮಯ್ಯ ಗೋರಕ್ಷ, ಅನಿಮಿಷ, ಅಮುಗಿದೇವ, ರಾಯಮ್ಮ, ರೇಕಮ್ಮ ಶಾಂಭವಿ, ಸೌಂದರ್ಯ ದೇವಿ ಅಗಮಮೋಹಿನಿ, ಮಸಣಮ್ಮ ಕೊಟ್ಟಣದ ಸೋಮಮ್ಮ ಮೊದಲಾದವರು ಚಂಗಣಿಗಿಲ ಮಂಟಪದ ಚಿತ್ಶೈಶಾನುಭವಿಗಳಾತದ್ದರೆಂದು ಹೇಳಲಾಗುತ್ತಿದೆ.೧೩

ಇವರಲ್ಲಿ ಹೆಚ್ಚಿನ ಶರಣರು ಕಲ್ಯಾಣದಲ್ಲಿ ಶರಣರಾಗಿದ್ದು, ಅನುಭವ ಮಂಟಪದ ಸಕ್ರೀಯ ಸದಸ್ಯರಾಗಿದ್ದವರು ಅಂದರೆ ಅದೇ ಕಾಲಕ್ಕೆ ರೇವಣಸಿದ್ದರ ಚಂಗಣಿಗಿಲ ಮಂಟಪವು ಕಲ್ಯಾಣದಲ್ಲಿತ್ತೆಂದೂ, ಶರಣರು ಅನುಭವ ಮಂಟಪಕ್ಕೆ ಹೋಗಿ ಶಿವಾನುಭ ಗೋಷ್ಠಿಯಲ್ಲಿ ಕೂಡುತ್ತಿದ್ದಂತೆ, ಈ ಚಂಗಣಿಗಿಲ ಮಂಟಪಕ್ಕೂ ಹೋಗುತ್ತಿದ್ದರೆಂದು ಇದರಿಂದ ಗೊತ್ತಾಗುತ್ತದೆ.

> ಏಕೆಂದರೆ ಸಂಗನಬಸವೇಶ್ವರ ವಚನದಲ್ಲಿ
> " ಚಂಗಣಿಗಿಲ ಮಂಟಪದ ರೇವಣಸಿದ್ದೇಶ್ವರಂಗೆ
> ನಿರ್ಲಜ್ಜ ಶಾಂತಯ್ಯನೆಂಬ ದೇಶಿಕೇಂದ್ರನು ಭೋಧಿಸಿದನು ನೋಡಾ;
> ಅದೇ ಪ್ರಸಾದವನು ರೇವಣಸಿದ್ದೇಶ್ವರನೆಂಬ ದೇಶಿಕೇಂದ್ರನು ತಮ್ಮಡಿಗೆರಗಿ ಬಂದ ಶಿವಶರಣರಿಗೆ ಸ್ವಾನುಭಾವ ಸೂತ್ರವ ಬೋಧಿಸುತ್ತಿದ್ದರು ನೋಡಾ ।

ಎಂದು ಹೇಳುತ್ತಾರೆ ಶಿವಶರಣರಿಗೆ ಬೋಧಿಸುವುದರ ಜೊತೆಗೆ ಇವರು ಕೂಡಾ ವಚನಕಾರರಾಗಿದ್ದಂತೆ ತಿಳಿದು ಬರುತ್ತದೆ. ಅಲ್ಲದೆ ಅಂದು ಕಲ್ಯಾಣದಲ್ಲಿ, ಅಕ್ಕನಾಗಮ್ಮನವರ

ನೆಲಮಾಳಿಗೆಯಲ್ಲಿದ್ದ ಜ್ಞಾನಪ್ರಕಾಶ ಮಂಟಪ, ವಿಚಾರ ಮಂಟಪಗಳು ಕೂಡಾ ಕಲ್ಯಾಣದಲ್ಲಿದ್ದವೆಂದು ತಿಳಿದು ಬರುತ್ತಿದೆ. ೧೪

ಚನ್ನಪ್ಪ ಉತ್ತಂಗಿಯವರು ಹೇಳುವಂತೆ ಈ ಎಲ್ಲಾ ಮಂಟಪಗಳು ಅನುಭವ ಮಂಟಪದ ಶಾಖೆಗಳಾಗಿದ್ದು, ಅವು ಅವರ ವೈಯುಕ್ತಿಕ ಮಂಟಪಗಳಾಗಿದ್ದು. ಅವುಗಳಿಗೆ ಬೇರೆ ಬೇರೆ ಹೆಸರುಗಳು ಕೊಡಲ್ಪಟ್ಟಂತೆ ತೋರುತ್ತದೆ.

ಈ ಎಲ್ಲಾ ಆಧಾರಗಳನ್ನು ಗಮನಸಿ ನೋಡಿದಾಗ ರೇವಣಸಿದ್ದರು ಬಸವಾದಿ ಶರಣರ ಸಮಕಾಲೀನರಾಗಿದ್ದು ಕಲ್ಯಾಣಕ್ಕೂ ಬಂದಿದ್ದಾರೆ, ಅಲ್ಲಿ ಮಂಟಪವೊಂದನ್ನು ಕಟ್ಟಿ ಶಿವಾನುಗೋಷ್ಠಿಗಳನ್ನು ನಡೆಸಿ ತನ್ನ ಮಗನಾದ ರುದ್ರಮುನಿದೇವರಿಗೆ ಕಲ್ಯಾಣದಲ್ಲಿ ನೆಲೆಸುವಂತೆ ಹೇಳಿ, ತಾವೂ ವಚನಗಳನ್ನು ರಚಿಸಿದ್ದಾರೆ.

ಇಂದಿನ ಈ ಮಠದೊಳಗೆ ಒಂದು ಗದ್ದುಗೆಯಿದ್ದು ಅದರ ಮೇಲೆ ರೇವಣಸಿದ್ದರ ಮೂರ್ತಿಯೊಂದನ್ನು ಇಟ್ಟಿದ್ದಾರೆ ಅಲ್ಲದೆ ಬಸವಕಲ್ಯಾಣದಿಂದ ೫ ಕೀಮೀ ದೂರದಲ್ಲಿರುವ ಧನ್ನೂರು ಗ್ರಾಮದಲ್ಲಿ ರೇವಣಸಿದ್ದೇಶ್ವರ ಗುಡಿಯೊಂದು ಕಂಡು ಬರುತ್ತದೆ.

### ೪) ಪ್ರಭುದೇವರ ಮಠ (ಗದ್ದುಗಿ ಮಠ)

ಶೂನ್ಯ ಸಿಂಹಾಸನಾಧಿಪತಿ ಅಲ್ಲಮ ಪ್ರಭುಗಳ ಮಠವಿದು ಶೂನ್ಯ ಸಿಂಹಾಸನದ ಮೂಲ ಪೀಠವೆಂದು ಇದನ್ನು ಕರೆಯುತ್ತಾರೆ. ಕಲ್ಯಾಣದ ಇಂದಿನ ಮಠಗಳಲ್ಲಿಯೇ ಇದು ಸುಸ್ಥಿತಿಯಲ್ಲಿದೆ.

ಈ ಮಠದಲ್ಲಿ ಒಂದು ಚಿಕ್ಕ ಬಾಗಿಲುಳ್ಳ ಒಂದು ಕೋಣೆಯಿದ್ದು, ಅದು ಪ್ರಜೆ ಧ್ಯಾನಕ್ಕೆ ತುಂಬಾ ಪ್ರಶಸ್ತವಾದ ಸ್ಥಳವಾಗಿದೆ. ಅದಕ್ಕೆ ಹೊಂದಿಕೊಂಡಂತೆ ಒಂದು ಬಾಯಿಯಿದೆ ಪ್ರಭು ದೇವರ ಸ್ನಾನ, ಪ್ರಜೆ, ಧ್ಯಾನ ಈ ಎಲ್ಲಾ ಆಚಾರ ಕ್ರಿಯೆಗಳು ಇಲ್ಲಿಯೇ ನಡೆಯುತ್ತಿದ್ದವೆಂಬುದು ಅಲ್ಲಿಯ ಜನರ ನಂಬಿಕೆ. ಇದಕ್ಕೆ ಏಕಾಂಗಿ ಮಠವೆಂದು ಕರೆಯುತ್ತಾರೆ.

ಈ ಮಾತಿಗೆ ನಿದರ್ಶನ ಎನ್ನುವಂತೆ, ಗೂಳೂರು ಸಿದ್ದ ವೀರಣ್ಣೊಡೆಯರು ಸಂಗ್ರಹಿಸಿದ ಪ್ರಭುದೇವರ ಶೂನ್ಯ ಸಂಪಾದನೆಯಲ್ಲಿ ಪ್ರಭುದೇವರು ಬಸವಣ್ಣನವರ ಮಠಕ್ಕೆ ಬಂದು ಅಲ್ಲಿಂದ ಹೋಗುವಾಗ "ಸೊಡ್ಡಳ ಬಾಚರಸರ ಹೆಗಲಮೇಲೆ ಹಸ್ತಮಂ ಮಡಗಿ, ಚನ್ನಬಸವ ರಾಜದೇವರೊಡನೆ ನಸುನಗೆಯಿಂ ಪ್ರಸಂಗಿಸುತ ಏಕಾಂತದ ಮಠಕ್ಕೆ ಬಿಜಯಂಗೈದು ಮೂರ್ತಿಗೊಂಡಲ್ಲಿ" ೧೫ ಎಂದು ವರ್ಣಿಸುತ್ತಾರೆ.

ಆ ಏಕಾಂತದ ಮಠವೇ ಇಂದು ಜನರ ಬಾಯಿಲ್ಲಿ ಏಕಾಂಗಿಯೆಂದಾಗಿದೆ. ಈ ಮಠದ ಇನ್ನೊಂದು ಭಾಗದಲ್ಲಿಯೇ ದೊಡ್ಡದಾದ ಗದ್ದುಗೆಯಿರುವ ಮತ್ತೊಂದು ಕೋಣೆಯಿದೆ. ಮಠಕ್ಕೆ ಬಂದ ಶರಣರೊಂದಿಗೆ ಚರ್ಚಿಸಲು ಪ್ರಭುದೇವರು ಆ ಗದ್ದುಗೆಯ ಮೇಲೆ ಕೂಡುತ್ತಿದ್ದರೆಂದು ಹೇಳುತ್ತಾರೆ.

ಇಂದಿಗೂ ಈ ಗದ್ದುಗೆಯ ಮೇಲಾಗಲಿ, ಅದರ ಹೊಸ್ತಿಲ ಮೇಲಾಗಲಿ ಬೆಲ್ಲಿ ಸಕ್ಕರೆಗಳನ್ನಿಟ್ಟರೆ ನೊಟ ಇರುವೆ ಬರುವುದಿಲ್ಲವೆಂಬುದೊಂದು ಆಶ್ಚರ್ಯವ ವಿಷಯ. ಇದೊಂದು ಅಲ್ಲಿಯ ನಂಬಿಕೆಯಾಗಿದೆ.

### ೫) ಅಂಬಿಗರ ಚೌಡಯ್ಯನ ಮಠ

ಬಸವಕಲ್ಯಾಣದ ಕಬ್ಬಲಿಗರ ಓಣಿಯಲ್ಲಿ ನಿಜಶರಣ ಅಂಬಿಗರ

ಚೌಡಯ್ಯನವರ ಮಠವಿದೆ. ಶರಣರ ಸಮೂಹದಲ್ಲಿಯೇ ಅಂಬಿಗರ ಚೌಡಯ್ಯ ಸ್ವಭಾವ ಬಹಳ ಸಿಟ್ಟಿನದು. ಇದ್ದುದ್ದನ್ನು ಇದ್ದ ಹಾದೇ ಆಡುವ ನಿಷ್ಠುರವಾದಿ.
ಕಲ್ಯಾಣದ ತ್ರಿಪುರಾಂತಕ ಕೆರೆಯಲ್ಲಿ ದೋಣಿಯನ್ನು ನಡೆಸುವ ಕಾಯಕ ಇವರದಾಗಿತ್ತು. ತಮ್ಮೊಂದು ವಚನದಲ್ಲಿ,

ಗಾಳಿಯು ಹಡೆದಲ್ಲಿ ತೂರಿಕೊಳ್ಳಿರಯ್ಯಾ,
ಗಾಳಿ ನಿಮ್ನಾಧಿನವಲ್ಲವಯ್ಯಾ
ನಾಳೆ ತೂರಿದೆನೆಂದರೆ ಇಲ್ಲವಯ್ಯಾ,
ಶಿವಶರಣೆಂಬುದೊಂದು ಗಾಳಿಯ ಹಡೆದಲ್ಲಿ
ಬೇಗ ತೂರೆಂದ ನಮ್ಮ ನಂಬಿದ ಅಂಬಿಗರಚೌಡಯ್ಯ. ೧೬

ಈ ಶಿವಶರಣೆಂಬ ಗಾಳಿ ಕಲ್ಯಾಣದಲ್ಲಿ ಬಿಟ್ಟಾಗ ತಾನೂ ಅಲ್ಲಿಗೆ ಬಂದು ಕಾಯಕ ದಾಸೋಹ ಮಾಡಿ, ನಿಷ್ಠೆಯಿಂದ ಲಿಂಗತತ್ವ ಅರಿತುಕೊಂಡು ಮಹಾಶರಣನಾದ ಅಂಬಿಗರ ಚೌಡಯ್ಯ ಬಸವಣ್ಣನವರನ್ನು ಬಹು ಸಮೀಪದಿಂದ ಕಂಡು ಅನಂದಿಸಿದ್ದಾನೆ. ಇದಕ್ಕವರ ವಚನಗಳೇ ಆಧಾರಗಳಾಗಿವೆ.

'ಗುರುಲಿಂಗ ಜಂಗಮಕ್ಕೆ ಆಧಾರ ಬಸವಣ್ಣ
ಪಾದೋದಕ ಪ್ರಸಾದಕ್ಕೆ ಆಧಾರ ಬಸವಣ್ಣ
ಸರ್ವಾಪತ್ತಿಗಾಧಾರವೇ ಬಸವಣ್ಣ
ಸ್ವರ್ಗ ಮರ್ತ್ಯ ಪಾತಾಳಕ್ಕೆ ಬಸವಣ್ಣನ ಚೈತನ್ಯವಲ್ಲದಿಲ್ಲ'
ಆ ಬಸವಣ್ಣನ ಶ್ರೀಪಾದಕ್ಕೆ ನಮೋನಮೋ
ಎನುತಿರ್ದಾತನಂಬಿಗ ಚೌಡಯ್ಯ ೧೭

ಚೌಡಯ್ಯನವರು ಎಷ್ಟು ನಿಷ್ಠುರವಾದಿಗಳೋ, ಅಷ್ಟೇ ಶಿವಶರಣರಲ್ಲಿ ಗೌರವ ಉಳ್ಳವರು ಆಗಿದ್ದರು. ಶಿವಭಕ್ತಿ ಶಿವಾಚಾರ ಬೇಕಾಗಿದ ಭಕ್ತರು ತನ್ನ ಮಠಕ್ಕೆ ಬಂದು, ಲಿಂಗ ಜಂಗಮದ ಸಮಯಾಚಾರ ಸಮಯ ಭಕ್ತಿಯ ನಡೆಸಬೇಕಯ್ಯ ಎನ್ನುತ್ತಾ ತನ್ನ ಮಠಕ್ಕೆ ಬಂದವರನ್ನು ಅದೇ ರೀತಿಯಲ್ಲಿ ಕಂಡವರು.
ಇಂದು ಅಂಬಿಗ ಚೌಡಯ್ಯನ ಮಠದಲ್ಲಿ ಒಂದು ಗದ್ದುಗೆಯಿದ್ದು. ಅದರ ಮೇಲೆ ಜೋಡು ಪಾದುಕೆಗಳಿವೆ. ಅದು ಅಂಬಿಗರ ಚೌಡಯ್ಯನವರ ಸಮಾಧಿ ಆಗಿದೆ.

**೬) ಉರಿಲಿಂಗಪೆದ್ದಿ ಮಠ**

ಬಸವಕಲ್ಯಾಣದ ಹರಿಜನರ ಓಣಿಯಲ್ಲಿ ಉರಿಲಿಂಗಪೆದ್ದಿಗಳ ಮಠವನ್ನು ಕಾಣಬಹುದಾಗಿದೆ. ಶರಣಪೂರ್ವ ಬದುಕಿನಲ್ಲಿ ಕಳ್ಳನಾಗಿದ್ದ ಪೆದ್ದಣ್ಣನು, ಉರಿಲಿಂಗದೇವರು ನಂದಿವಾಡದ ಸೂರಯ್ಯ ಭಕ್ತನಿಗೆ ಗುಪ್ತವಾಗಿ ಲಿಂಗದೀಕ್ಷೆ ಕೊಡುವುದನ್ನು ನೋಡಿ, ತಾನು ಲಿಂಗ ಪಡೆಯಬೇಕು, ಗುರು ಉರಿಲಿಂಗದೇವರಿಂದ ಲಿಂಗದೀಕ್ಷೆ ಮಾಡಿಸಿಕೊಳ್ಳಬೇಕೆಂಬ ಅತ್ಯಾಸೆಯಿಂದ ದಿನಾಲು ಗುರುಮಠಕ್ಕೆ ಹುಲ್ಲು, ಕಟ್ಟಿಗೆ ತಂದು ಹಾಕುವ ಕಾಯಕ ಮಾಡತೊಡಗಿದನು.
ದಿನಾಲು ಲಿಂಗದೀಕ್ಷೆ ಸಲುವಾಗಿ ಗುರುವನ್ನು ಕಾಡಲು ಸಿಟ್ಟಿಗೆದ್ದ ಉರಿಲಿಂಗದೇವಾ 'ಘೇಜಾಗಡಿ ಚಾ' ಎಂದು ಗದರಿಸಿ ಕಲ್ಲವನ್ನು ಎಸೆಯಲು ಅ ಕಲ್ಲನ್ನೆ ಲಿಂಗವೆಂದೂ, ಆ ಶಬ್ದವೇ ಮಂತ್ರವೆಂದು ಭಾವಿಸಿ ಶಿವಭಕ್ತನಾದನು. ಉರಿಲಿಂಗದೇವರ ತರುವಾಯ ಆ ಗುರು ಪೀಠವನ್ನೇರಿದನು.
ಬಸವಣ್ಣನವರನ್ನು ಕಂಡಂತೆ ಕಲ್ಯಾಣಕ್ಕೆ ಬಂದಂತೆ ತಿಳಿದು ಬರುತ್ತದೆ. ಅವರ ವಚನಗಳಲ್ಲಿ ಶರಣರನ್ನು ಪ್ರತ್ಯೋಕ್ಷ ಕಂಡಂತೆ ವಿವರಗಳು ದೊರಕುತ್ತದೆ.

ಭಕ್ತ ಸ್ಥಲ ಸಾಧ್ಯವಾಯಿತ್ತು. ಸಂಗನಬಸವರಾಜ ದೇವರಿಗೆ,
ಮಾಹೇಶ್ವರ ಸ್ಥಲ ಸಾಧ್ಯವಾಯಿತ್ತು. ಮಡಿವಾಳ ಮಾಚಿ ತಂದೆಗಳಿಗೆ,
ಪ್ರಸಾದಿ ಸ್ಥಲ ಸಾಧ್ಯವಾಯಿತ್ತು. ಬಿಬ್ಬಿ ಬಾಚಯ್ಯಗಳಿಗೆ
ಪ್ರಾಣ ಲಿಂಗಿ ಸ್ಥಲ ಸಾಧ್ಯವಾಯಿತು. ಅನಿಮಿಷ ದೇವರಿಗೆ
ಶರಣಸ್ಥಲ ಸಾಧ್ಯವಾಯಿತು ಅಲ್ಲಮಪ್ರಭುದೇವರಿಗೆ,
ಐಕ್ಯಸ್ಥಲ ಸಾಧ್ಯವಾಯಿತು. ಅಜಗಣ್ಣಗಳಿಗೆ,
ಸರ್ವಾಚಾರಸ್ಥಲ ಸಾಧ್ಯವಾಯಿತು. ಚನ್ನಬಸವಯ್ಯಗಳಿಗೆ
ಎನಗೆ ಷಟಸ್ಥಲ ಸರ್ವಾಚಾರವೆ ಸಾಧ್ಯವಾಗಿ ಇಂತಿವರ
ನೆನೆದು ಶುದ್ಧವಾದೆನು 'ಕಾಣಾ ಉರಿ ಲಿಂಗಪ್ಪೆದಿ ಪ್ರಿಯಾ ವಿಶ್ವೇಶ್ವರಾ" ೧೮

ಇನ್ನೂ ಇದಕ್ಕೆ ಹೆಚ್ಚು ಪುಷ್ಠಿ ನೀಡುತ್ತದೆ. ಬಸವಕಲ್ಯಾಣದಲ್ಲಿದ್ದ ಅವರ ಮಠ ಈ ಮಠದಲ್ಲಿ ಆವರ ಸಮಾಧಿ ಇವರು ಗದ್ದುಗೆಯಿದೆ. ಕಲ್ಯಾಣ ಕ್ರಾಂತಿಕ್ಕಿಂತಲೂ ಮೊದಲೇ ಅವರು ಲಿಂಗೈಕ್ಯರಾಗಿದ್ದಂತೆ ತೋರುತ್ತದೆ.

**೭) ದಾಸೋಹ ಮಠ**

ಬಸವಣಕಲ್ಯಾಣದಲ್ಲಿರುವ ಮಠಗಳಲ್ಲಿಯೇ ಇದೊಂದು ವಿಶಿಷ್ಟಬಗೆಯದಾಗಿದೆ. ಉಳಿದ ಮಠಗಳಿಗೆ ಶರಣರ ಹೆಸರುಗಳಿದ್ದರೆ, ಇದಕ್ಕೆ ಅವರ ಹೆಸರಿಲ್ಲದೆ, ಅವರ ಮುಖ್ಯ ತತ್ತ್ವವಾದ ದಾಸೋಹ ಶಬ್ದದಿಂದ ಕರೆಯುತ್ತಾರೆ. ದಾಸೋಹವನ್ನು ಮೂಲ ಗುರಿಯನ್ನಾಗಿರಿಸಿಕೊಂಡ ಮಠವಿದು. ಚನ್ನಬಸವಣ್ಣನವರು. ತಮ್ಮೊಂದು ವಚನದಲ್ಲಿ ಕಲ್ಯಾಣದ ಮಹಿಮೆಯನ್ನು ವಿವರಿಸುತ್ತಾ, ಅಸಂಖ್ಯಾತ ದಾಸೋಹ ಮಠಗಳು ಕಲ್ಯಾಣದಲ್ಲಿದ್ದವು ಎಂಬುದನ್ನು ಹೇಳುತ್ತಾರೆ.
ಅಷ್ಟೆಲ್ಲಾ ಮಠಗಳು ಇಂದು ಕಲ್ಯಾಣದಲ್ಲಿ ಇಲ್ಲವಾದರೂ ಸಿಕ್ಕ ಒಂದು ಮಠದಿಂದಾಗಿ ಅಂದು ದಾಸೋಹದ ಮಠಗಳು ಕಲ್ಯಾಣದಲ್ಲಿ ಇದ್ದವೆಂದು ಊಹಿಸಬಹುದಾಗಿದೆ. ಕಲ್ಯಾಣಕ್ಕೆ ಅಂದು ಬರುವವರ ಸಂಖ್ಯೆಯು ದೊಡ್ಡ ಪ್ರಮಾಣದಲ್ಲಿತ್ತು. ಬಂದವರಿಗೆಲ್ಲಾ ದಾಸೋಹ ಮಾಡಿಸುವುದು ಕಡ್ಡಾಯವಾಗಿತ್ತು. ಹೀಗಾಗಿ ಕಲ್ಯಾಣದಲ್ಲಿ ಅಂದು ಹೆಚ್ಚಿನ ಮಠಗಳು ದಾಸೋಹದ ಮಠಗಳೇ ಆಗಿದ್ದವು.
ಈ ಮಠದ ಇಂದಿನ ವಿಸ್ತಾರತೆಯನ್ನು ಗಮನಿಸಿದ್ದೆ, ಆದರೆ ಮೊದಲೆಲ್ಲಾ ಇದು ದೊಡ್ಡ ಮಠವೇ ಆಗಿತ್ತೆಂದು ತೋರುತ್ತದೆ. ಜನರು ಒಳ್ಳೆಯ ರೀತಿಯಿಂದ ಕುಳಿತು ಪ್ರಸಾದ ಪಡೆಯಲು ಅನುಕೂಲವಾಗುವಂತಹ ಸ್ಥಳವೇ ಆಗಿತ್ತೆಂದು ತೋರುತ್ತದೆ. ಆದರೆ ಈಗ ಅದು ತನ್ನ ಭವ್ಯತೆಯನ್ನೆಲ್ಲಾ ಕಳೆದುಕೊಂಡು ಸಾಮಾನ್ಯ ಮನೆಯ ರೂಪ ಪಡೆದಿದೆ.
ಇವುಗಳಲ್ಲದೆ ಕಟಗಿ ಮಠ, ಕಣಗೀಲ ಮಠ, ಗಚ್ಚಿನ ಮಠ ಮುಂತಾದ ಹೆಸರಿನಲ್ಲಿರುವ ಮಠಗಳು ಲಭ್ಯವಾಗಿವೆ. ಆದರೆ ಅವು ಯಾವ ಶರಣರಿಗೆ ಸಂಬಂಧಿಸಿದವು ಎಂದು ಹೇಳಲು ಸಾಧ್ಯವಿಲ್ಲ.
ಕಲ್ಯಾಣದ ಸುತ್ತಮುತ್ತ ಕೆಲವು ಹಳ್ಳಿಗಳಲ್ಲಿ ಶರಣರ ಹೆಸರಿನಲ್ಲಿ ಮಠಗಳು ದೊರಯುತ್ತವೆ. ಹುಲಸೂರು ಮತ್ತು ಮಂಠಾಳಗಳಲ್ಲಿ ಇವುಗಳು ಸಂಖ್ಯೆ ಹೆಚ್ಚಾಗಿದೆ. ಬಸವಣಕಲ್ಯಾಣದಿಂದ ೨೦.೨೫ ಕೀ.ಮೀ. ಅಂತರದಲ್ಲಿ ಮಂಠಾಳ ಗ್ರಾಮಕ್ಕೆ ಮೊದಲು 'ಮಠಾಲಯ' ಎಂದೇ ಕರೆಯುತ್ತಿದ್ದರು. ೭೭೦ ಅಮರಗಣಂಗಳ ಮಠಗಳೆಲ್ಲಾ ಇಲ್ಲಿಯೇ ಇದ್ದವೆಂದು ಅಲ್ಲಿಯ ಜನರ ನಂಬಿಕೆಯಾಗಿದೆ. 'ಮಠಾಲಯ' ಶಬ್ದವೇ ಬರುಬರುತ್ತಾ ಮಂಠಾಳ ಎಂದಾಗಿರ ಬಹುದು.
ಇಂದು ಈ ಗ್ರಾಮದಲ್ಲಿರುವ ಮನೆಗಳ ಸ್ವರೂಪವೆಲ್ಲಾ ಮಠಗಳನ್ನೆ ಹೋಲುತ್ತದೆ. ಮನೆಯ ಬಾಗಿಲುಗಳು ಮಠದ ಬಾಗಿಲುಗಳಂತೆ ಚಿಕ್ಕರೂಪದಲ್ಲಿ ಇದ್ದು. ಪ್ರತಿಯೊಬ್ಬರ ಮನೆಯಲ್ಲಿಯೂ ಒಂದು

ಗದ್ದುಗೆಯೂ ಒಂದೊಂದು ಬಾವಿಕೂಡಾ ಇದೆ. ಶರಣರೆಲ್ಲಾ ಹೊರಟು ಹೋದ ಮೇಲೆ ಬಹುಶ: ಅವು ಮನೆಗಳಾಗಿ ಪರಿವರ್ತಿಗೊಂಡಿರಬಹುದಾಗಿದೆ. ಈಗ ಗುಹೇಶ್ವರ ಮಠ ಮಾತ್ರ ಅಸ್ತಿತ್ವದಲ್ಲಿದೆ. ಹನ್ನೆರಡನೆಯ ಶತಮಾನದಲ್ಲಿ ಈ ಮಠವು ಸ್ಥಾಪನೆಯಾಗಿದ್ದು. ಮುಂದೆ ಅನೇಕ ಗುರುಗಳು ಈ ಪೀಠವನ್ನು ಅಲಂಕರಿಸಿ ಅದನ್ನು ಉದ್ದಾರಗೊಳಿಸಿದ್ದಾರೆ,

ಬಸವಕಲ್ಯಾಣದಿಂದ ಸುಮಾರು ೨೦ ಕೀ.ಮೀ ದೂರದಲ್ಲಿರುವ ಹುಲಸೂರು ಗ್ರಾಮದಲ್ಲಿರುವ ಗುರುಬಸವೇಶ್ವರ ಸಂಸ್ಥಾನ ಮಠವು ಅಸ್ತಿತ್ವದಲ್ಲಿದೆ. ೧೨ನೆಯ ಶತಮಾನದಲ್ಲಿ ಪ್ರಭುದೇವರು ಈ ಮಠವನ್ನು ಸ್ಥಾಪಿಸಿದ್ದಾರೆ. ಅಂದಿನಂದ ಇಲ್ಲಿಯವರೆಗೆ ಅನೇಕ ಗುರುಗಳು ಈ ಮಠವನ್ನು ಉದ್ದಾರಗೊಳಿಸಿದ್ದಾರೆ. ಈಗಿರುವ ಶ್ರೀ.ಮ.ನ.ಪ್ರ. ಶಿವಾನಂದ ಸ್ವಾಮಿಗಲು ೨೦ನೆಯವರು.

**ಅಡಿಟಿಪ್ಪಣೆಗಳು**

೧) ಶಿವಶರಣೆಯರ ವಚನ ಸಂಪುಟ ಸಂ. ಡಾ. ವೀರಣ್ಣರಾಜುರು ಪುಟ.೨೩೩ ವ.೧೩
೨) ಚ.ಬ.ವ. ಸಂ. ಡಾ. ಆರ್.ಸಿ. ಹಿರೇಮಠ ಪುಟ. ೧೫೨ ವಚನ.೩೪೫.
೩) ಹರಿಹರನ ರಗಳೆಗಳು ಸಂ. ಡಾ. ಫ.ಗು.ಹಳಕಟ್ಟಿ ಪುಟ.೪೧೨.
೪) ಸಂ.ವ. ಸಂಪುಟ. ಸಂ.ಡಾ. ಬಿ.ಆರ್.ಹಿರೇಮಠ ಪುಟ.೫೪ ವಚನ.೧೨೮.
೫) ಶಿವಶರಣೆಯರ ವಚನ ಸಂಪುಟ ಸಂ. ಡಾ. ವೀರಣ್ಣರಾಜುರು ಪುಟ.೨೨೫ ವಚನ.೭೦೦.
೬) ಬಸವಣ್ಣನವರ ವಚನ ಸಂಪುಟ ಸಂ. ಡಾ. ಎಂ.ಎಂ.ಕಲಬುರ್ಗಿ ಪುಟ.೮೩ ವಚನ.೩೪೪.
೭) ಶಿವಶರಣೆಯರ ವಚನ ಸಂಪುಟ ಡಾ. ವೀರಣ್ಣರಾಜುರು ಪುಟ.೬ ವಚನ.೧೫.
೮) ಹರಿಹರನ ರಗಳೆಗಳು ಸಂ. ಡಾ. ಎಂ.ಎಂ.ಕಲಬುರ್ಗಿ ಪುಟ. ೩೨೮ ಸ್ಥಲ.೧೦.
೯) ಶರಣ ಲೀಲಾಮೃತ ಸಂ. ಶಿವಬಸವ ಸ್ವಾಮಿ ಪುಟ.೨೪೯.
೧೦) ಗಿರಿಕೋಗಿಲೆ ಸಂ. ಡಾ. ನೀಲಾಂಬಿಕಾ ಪೋಲಿಸ್‌ಪಾಟೀಲ ಪುಟ.೧೯೮ ಪದ್ಯ.೧೩೯.
೧೧) ಶಿವಾನುಭವ ಪತ್ರಿಕೆ ಸಂಪುಟ.೪ ಸಂಚಿಕೆ.೩.
೧೨) ವೀರಶೈವ ಸಾಹಿತ್ಯ ಸಮಿಕ್ಷೆ ಸಂ. ಸದಾನಂದ ಕನವಳ್ಳಿ ಪುಟ.೧೫
೧೩) ವೀರಶೈವ ಸಾಹಿತ್ಯ ಸಮಿಕ್ಷೆ ಸಂ. ಸದಾನಂದ ಕನವಳ್ಳಿ ಪುಟ.೪೨
೧೪) ಶ್ರೀ ಬಸವೇಶ್ವರರು ಪುಟ.೨೧೬
೧೫) ಬಯಲುಗಳಿಕೆಯ ಬೆಳಗು. ಜೋಳದ ರಾಶಿ ದೊಡ್ಡನ ಗೌಡ ಪುಟ.೪೯೬
೧೬) ಸಂ. ವ.ಸಂಪುಟ.೧ ಸಂ.ಡಾ.ಎಂ.ಎಂ.ಕಲಬುರ್ಗಿ ಪುಟ.೫.
೧೭) ಸಂ. ವ. ಸಂಪುಟ.೨ ಡಾ. ಎಸ್.ವಿದ್ಯಾಶಂಕರ.
೧೮) ಸಿದ್ಧರಾಮೇಶ್ವರರ ವಚನಗಳು ಸಂ.ಡಾ.ಎಸ್.ವಿದ್ಯಾಶಂಕರ ಪುಟ.೩೦೫ ವಚನ.೧೦೭೬.
೧೯) ಬಯಲುಗಳಿಕೆಯ ಬೆಳಗು. ಜೋಳದ ರಾಶಿ ದೊಡ್ಡನ ಗೌಡ ಪುಟ.೨೦೧.
೨೦) ಬಯಲುಗಳಿಕೆಯ ಬೆಳಗು. ಜೋಳದ ರಾಶಿ ದೊಡ್ಡನ ಗೌಡ ಪುಟ.೧೯೮–೯೯.
೨೧) ಗೂಳುರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆ ಪ್ರೊ. ಭೂಸನೂರ ಮಠ ಪುಟ.೭೭೭
೨೨) ಬಸವಪಥ ಸಂಚಿಕೆ ನವೆಂಬರ್ ೨೦೦೩.
೨೩) ಗಿರಿಕೋಗಿಲೆ ಸಂ. ಡಾ. ನೀಲಾಂಬಿಕಾ ಪೋಲಿಸ್‌ಪಾಟೀಲ ಪುಟ.೩೩೨ ಪದ್ಯ.೧೮೯.
೨೪) ಸಂ. ವ. ಸಂಪುಟ.೨ ಡಾ. ಎಸ್.ವಿದ್ಯಾಶಂಕರ ಪುಟ.೪೨೫. ವಚನ.೬.
೨೫) ಅವ್ವಾ ಕಾಡಾದಿ ಗೌರವ್ವ ಹಾಡಿದ ಹಾಡು ಸಂ. ಡಾ. ನೀಲಾಂಬಿಕಾ ಪೋಲಿಸ್‌ಪಾಟೀಲ ಪುಟ.೧೯೯ ಪದ್ಯ. ೮೩
೨೬) ಹರಿಹರನ ರಗಳೆಗಳು ಸಂ.ಡಾ. ಎಂ.ಎಂ.ಕಲಬುರ್ಗಿ ಪುಟ.೨೯೭.
೨೭) ಬಸವೇಶ್ವರರ ಸಮಕಾಲಿನರು ಪುಟ.೩೦೬
೨೮) ಅಲ್ಲಮಪ್ರಭುಗಳ ವಚನ ಸಂಪುಟ ಸಂ. ಡಾ.ಬಿ.ವ್ಹಿ. ಮಲ್ಲಾಪುರೆ ವಚನ ೭೦೭.
೨೯) ಪ್ರಭುಲಿಂಗಲೀಲೆ ಸಂ.ಡಾ.ಬಿ.ವ್ಹಿ. ಮಲ್ಲಾಪುರೆ ಗತಿ.೧೫ ಪದ್ಯ.೩.
೩೦) ಪ್ರಭುಲಿಂಗಲೀಲೆ ಸಂ.ಡಾ.ಬಿ.ವ್ಹಿ. ಮಲ್ಲಾಪುರೆ ಗತಿ.೧೫ ಪದ್ಯ.೫.
೩೧) ಬಯಲು ಗಳಿಕೆಯ ಬೆಳಗು ಸಂ. ಜೋಳದರಾಶಿ ದೊಡ್ಡನ ಗೌಡರು ಪುಟ.೨೬೩.
೩೨) ಸಂಕೀರ್ಣ ವಚನ ಸಂಪುಟ ಸಂ. ಡಾ.ಬಿ.ಆರ್.ಹಿರೇಮಠ ಪುಟ.೩೯೧. ವಚನ.೧೩.
೩೩) ಚನ್ನಬಸವಣ್ಣನವರ ವಚನ ಸಂಪುಟ ಸಂ. ಡಾ.ಬಿ.ವ್ಹಿ.ಮಲ್ಲಾಪುರೆ ಪುಟ.೨೭೦ ವಚನ.೨೯.
೩೪) ಬಸವ ಪುರಾಣ ಸಂ. ಡಾ.ಆರ್.ಸಿ. ಹಿರೇಮಠ ಪುಟ.೧೮೩. ಸಂಧಿ.೧೧.
೩೫) ಬಸವ ಪುರಾಣ ಸಂ. ಡಾ.ಆರ್.ಸಿ. ಹಿರೇಮಠ ಪುಟ.೪೪೮. ಸಂದಿ.೨೮.
೩೬) ಶಿವತತ್ವ ಚಿಂತಾಮಣಿ ಸಂ. ಎಸ್.ಬಸವಪ್ಪಾ ಪುಟ.೩೭೩. ಪದ್ಯ.೧೫೮.
೩೭) ಶರಣ ಲೀಲಾಮೃತ ಸಂ. ಶಿವಬಸವ ಸ್ವಾಮಿಗಳು ಪುಟ.೫೮೮. ಸಂಧಿ.೨೫
೩೮) ಶಿವತತ್ವ ಚಿಂತಾಮಣಿ ಸಂ. ಎಸ್.ಬಸವಪ್ಪಾ ಪುಟ.೩೬೪. ಸಂಧಿ.೩೭.
೩೯) ಬಸವ ಪುರಾಣ ಸಂ. ಡಾ.ಆರ್.ಸಿ. ಹಿರೇಮಠ ಪುಟ.೨೭–೧೧.
೪೦) ಶಿವತತ್ವ ಚಿಂತಾಮಣಿ ಸಂ. ಎಸ್.ಬಸವಪ್ಪಾ ಸಂಧಿ.೩೭. ಪದ್ಯ.೧೧೩.
೪೧) ಬಸವ ಪುರಾಣ ಸಂ. ಡಾ.ಆರ್.ಸಿ. ಹಿರೇಮಠ ಪುಟ.೮೦೫. ಸಂಧಿ.೫೨.
೪೨) ಬಸವ ಪುರಾಣ ಸಂ. ಡಾ.ಆರ್.ಸಿ. ಹಿರೇಮಠ ಪುಟ.೩೦೧. ಪದ್ಯ.೮.
೪೩) ಬಸವ ಪುರಾಣ ಸಂ. ಡಾ.ಆರ್.ಸಿ. ಹಿರೇಮಠ ಪುಟ.೩೦೧. ಪದ್ಯ.೧೦.
೪೪) ಸಂಕೀರ್ಣ ವಚನ ಸಂಪುಟ.೪ ಸಂ. ಡಾ.ಬಿ.ಆರ್. ಹಿರೇಮಠ ಪುಟ.೮ ವಚನ.೧.
೪೫) ಹರಿಹರನ ರಗಳೆಗಳು ಸಂ. ಡಾ. ಎಂ.ಎಂ. ಕಲಬುರ್ಗಿ ಪುಟ.೨೪೭–೫೦.
೪೬) ಸಿದ್ಧರಾಮೇಶ್ವರರ ವಚನ ಸಂಪುಟ. ಸಂ. ಡಾ. ಎಸ್.ವಿದ್ಯಾಶಂಕರ ಪುಟ.೨೮೪. ವಚನ.೯೭.
೪೭) ಸಂಕೀರ್ಣ ವಚನ ಸಂಪುಟ.೧ ಸಂ. ಡಾ. ಎಂ.ಎಂ. ಕಲಬುರ್ಗಿ ಪುಟ. ೬೭೫. ವಚನ.೧೨.

೪೮) ಭೈ.ಕಾ.ಕ.ಸೂ.ರ. ಭಾಗ–೨ ಪುಟ.೩೭೭–೭೮.

೪೯) ಬಸವ ಪುರಾಣ ಸಂ. ಡಾ. ಆರ್.ಸಿ.ಹಿರೇಮಠ ಸಂಧಿ.೯ ಪದ್ಯ.೩.

೫೦) ಶಿವಶರಣೆಯರ ವಚನ ಸಂಪುಟ. ಡಾ. ವೀರಣ್ಣ ರಾಜುರು ಪುಟ.೨೪೦. ವಚನ.೭೩೭.

೫೧) ಶ್ರೀ ಬಸವೇಶ್ವರರು ಪುಟ.೨೬೬.